KACN320005902010

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕೊಳ್ಳೇಗಾಲ.**

**ದಿನಾಂಕಃ 10 ನೇ ಜೂನ್ 2026**

ಉಪಸ್ಥಿತರು

ಶ್ರೀಮತಿ. ಕಾವ್ಯಶ್ರೀ ಎಂ.
ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಕೊಳ್ಳೇಗಾಲ.

**ಅಸಲು ದಾವಾ ಸಂಖ್ಯೆ.67/2010**

**ವಾದಿ** : ಶ್ರೀಮತಿ. ತ್ರಿಪುರಾಂಬಿಕಾ

**(ಪ್ರತಿನಿಧಿಸುವವರುಃ ಶ್ರೀ.ಎಂ.ಆರ್.ಕೆ .,ವಕೀಲರು)**

**ವಿರುದ್ಧ/-**

**ಪ್ರತಿವಾದಿಗಳು** : ದೇವಮ್ಮ ಮತ್ತು ಇತರರು,

**(ಪ್ರತಿನಿಧಿಸುವವರುಃ ಶ್ರೀ.ಎಂ.ಪಿ., ಡಿ.ಎ.ಕೆ., ಬಿ.ಎನ್., ಪಿ.ಡಿ.ಪಿ., ಮತ್ತು ಎಜಿಪಿ.,ವಕೀಲರು)**

**-:ಮದ್ಯಂತರ ಅರ್ಜಿಯ ಪಕ್ಷಗಾರರ ಸ್ಥಾನಮಾನ:-**

**ಅರ್ಜಿದಾರರು** : ಮಹೇಶ್

…………2ನೇ ಪ್ರತಿವಾದಿ

**ವಿರುದ್ಧ/-**

**ಎದುರುದಾರರು** : ಶ್ರೀಮತಿ. ತ್ರಿಪುರಾಂಬಿಕಾ

…………. ವಾದಿ

| | | |
|---|---|---|
| *i* | ಅರ್ಜಿಯನ್ನು ಸಲ್ಲಿಸಿರುವ ಕಲಂ ಮತ್ತು ನಿಯಮ | ಸಿ. ಪ್ರ. ಸಂ. ಕ್ರಮಾದೇಶ **18** ನಿಯಮ 17, ಕಲಂ 151 |
| *ii* | ಅರ್ಜಿಯಲ್ಲಿ ಕೋರಿರುವ ಪರಿಹಾರ | ವಿಚಾರಣೆಗೆ ಪುನಃ ಕರೆಸಿ ದಾಖಲಾತಿಗಳನ್ನು ಸಲ್ಲಿಸಲು ಅನುಮತಿ ಕೋರಿ |
| *iii* | ಅರ್ಜಿಯನ್ನು ಸಲ್ಲಿಸಿದ ದಿನಾಂಕಃ | **21.04.2026** |
| | ಮಧ್ಯಂತರ ಅರ್ಜಿಯ ಸಂಖ್ಯೆ | ಮಧ್ಯಂತರ ಅರ್ಜಿ ಸಂಖ್ಯೆಃ **30** ಮತ್ತು **31** |
| *v* | ಮಧ್ಯಂತರ ಅರ್ಜಿಗೆ ಎದುರುದಾರರು ತಕರಾರು ಸಲ್ಲಿಸಿದ ದಿನಾಂಕ | **28.04.2026** |
| *vi* | ಮಧ್ಯಂತರ ಅರ್ಜಿಯ ಮೇಲೆ ಆದೇಶವಾದ ದಿನಾಂಕಃ | **10.06.2026** |

**<u>ಮಧ್ಯಂತರ ಅರ್ಜಿ ಸಂಖ್ಯೆ 30 ಮತ್ತು 31 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 18 ನಿಯಮ17, ಕಲಂ 151ರಡಿಯಲ್ಲಿನ ಅರ್ಜಿಯ ಮೇಲಿನ ಆದೇಶ.</u>**

ಅರ್ಜಿದಾರರು/**2**ನೇ ಪ್ರತಿವಾದಿಯು ಮಧ್ಯಂತರ ಅರ್ಜಿ ಸಂಖ್ಯೆ **30** ಮತ್ತು **31** ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **18** ನಿಯಮ**17**, ಕಲಂ **151** ರಡಿಯಲ್ಲಿನ ಅರ್ಜಿಯನ್ನು ಸಲ್ಲಿಸಿ, **2**ನೇ ಪ್ರತಿವಾದಿಯನ್ನು ವಿಚಾರಣೆಗೆ ಒಳಪಡಿಸಲು ಹಂತವನ್ನು ಪುನರ್ ಸ್ಥಾಪಿಸಿ, ವಿಚಾರಣೆಗೆ ಒಳಪಡಿಸಿಕೊಳ್ಳಲು ಅನುಮತಿ ಕೋರಿಕೊಂಡಿರುತ್ತಾರೆ.

**2.** ಅರ್ಜಿಯ ಜೊತೆ ಲಗತ್ತಿಸಿರುವ ಪ್ರಮಾಣ ಪತ್ರಿಕೆಯಲ್ಲಿ, ವಾದಿಯು ಪ್ರತಿವಾದಿಗಳ ವಿರುದ್ಧ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ. ಅರ್ಜಿದಾರರು/**2**ನೇ ಪ್ರತಿವಾದಿಯು ತಾತ್ಕಾಲಿಕವಾಗಿ ಬೆಂಗಳೂರಿನಲ್ಲಿ ಕುಟುಂಬ ಸಮೇತ ವಾಸ ಮಾಡುತ್ತಿದ್ದು, ವಿಚಾರಣೆಯ ಸಮಯದಲ್ಲಿ ಅರ್ಜಿದಾರರ ಅನಾರೋಗ್ಯದ ನಿಮಿತ್ತ ವಕೀಲರನ್ನು ಭೇಟಿ ಮಾಡಲು ಸಾಧ್ಯವಾಗಿರುವುದಿಲ್ಲ. ಹಾಗಾಗಿ ವಿಚಾರಣೆ ಇಲ್ಲಾ ಎಂಬುದಾಗಿ ಆದೇಶಿಸಲಾಗಿರುತ್ತದೆ. ಆದರೆ, ಇದರಲ್ಲಿ ಯಾವುದೇ ದುರುದ್ದೇಶ ಇರುವುದಿಲ್ಲ. ಈ ದಾವೆಯಲ್ಲಿ ಅರ್ಜಿದಾರರ ಪರವಾಗಿ ದಾಖಲಾತಿಗಳನ್ನು ಹಾಜರುಪಡಿಸುವುದು ಅವಶ್ಯಕವಾಗಿರುತ್ತದೆ. ಅರ್ಜಿಯನ್ನು ಪುರಸ್ಕರಿಸುವುದರಿಂದ ಎದುರುದಾರರಿಗೆ ಯಾವುದೇ ನಷ್ಟವುಂಟಾಗುವುದಿಲ್ಲ. ಆದ್ದರಿಂದ, ಈ ದಾವೆಯಲ್ಲಿ **2**ನೇ ಪ್ರತಿವಾದಿಯನ್ನು ವಿಚಾರಣೆಗೆ ಒಳಪಡಿಸಲು ಹಂತವನ್ನು ಪುನರ್ ಸ್ಥಾಪಿಸಿ, ವಿಚಾರಣೆಗೆ ಒಳಪಡಿಸಿಕೊಳ್ಳಲು ಅನುಮತಿ ಕೋರಿಕೊಂಡಿರುತ್ತಾರೆ.

**3.** ಸದರಿ ಮೇಲ್ಕಂಡ ಅರ್ಜಿಗೆ ವಾದಿಯು ತನ್ನ ತಕರಾರನ್ನು ಸಲ್ಲಿಸಿದ್ದು, **2**ನೇ ಪ್ರತಿವಾದಿಯ ಅರ್ಜಿಯು ವಾಸ್ತವಿಕವಾಗಲೀ, ಕಾರಣಾತ್ಮಕವಾಗಲೀ ಊರ್ಜಿತವಲ್ಲ ಎಂದು ತಿಳಿಸಿರುತ್ತಾರೆ. ವಾದಿಯು ಸದರಿ

ದಾವೆಯನ್ನು **2010**ನೇ ಸಾಲಿನಲ್ಲಿ ದಾಖಲಿಸಿದ್ದು ನಂತರ **2**ನೇ ಪ್ರತಿವಾದಿಗೆ ತಮ್ಮ ವಿಚಾರಣೆಗಾಗಿ ನ್ಯಾಯಾಲಯ ಸಾಕಷ್ಟು ಕಾಲಾವಕಾಶವನ್ನು ನೀಡಿದ್ದರೂ ವಿಚಾರರಣೆಗೆ ಒಳಗಾಗದೆ**,** ಸುಮಾರು **11** ವರ್ಷಗಳ ನಂತರ ಸದರಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ**.** ದಿನಾಂಕಃ **08.09.2010** ರಂದು ದಾವೆಯನ್ನು ದಾಖಲಿಸಿದ್ದು**, 2**ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರವನ್ನು ಸಲ್ಲಿಸಿಕೊಂಡಿರುತ್ತಾ ರೆ**.** ಆ ನಂತರ ದಿನಾಂಕಃ **30.10.2015**ರಲ್ಲಿ ಪ್ರತಿವಾದಿಯ ವಿಚಾರಣೆ ಇಲ್ಲಾ ಎಂಬುದಾಗಿ ಆದೇಶಿಸಲಾಗಿರುತ್ತದೆ**. 2**ನೇ ಪ್ರತಿವಾದಿಯ ಪರ ವಕೀಲರು ಪ್ರಾಸಾ**.1** ರವರನ್ನು ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹ**,** ಅರ್ಜಿದಾರರು ನ್ಯಾಯಾಲಯದ ಸಮಕ್ಷಮ ಗೈರು ಹಾಜರಾಗಿದ್ದ ಕಾರಣ ಅವರ ಹಿಂದಿನ ವಕೀಲರು ನಿವೃತ್ತಿ ಹೊಂದಿರುವುದಾಗಿ ಮೆಮೋ ಸಲ್ಲಿಸಿರುತ್ತಾರೆ**.** ಆ ನಂತರವೂ ಸಹ ಅರ್ಜಿದಾರರು ದಿನಾಂಕ **21.04.2026**ರ ವರೆಗೂ ಸಹ ನ್ಯಾಯಾಲಯದ ಸಮಕ್ಷಮ ಹಾಜರಾಗಿರುವುದಿಲ್ಲ**.** ತಮ್ಮ ಪ್ರಮಾಣ ಪತ್ರಿಕೆಯಲ್ಲಿ ಅನಾರೋಗ್ಯದ ಕಾರಣ ತಿಳಿಸಿದ್ದರೂ ಸಹ ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ**.** ಹಾಗೂ **11** ವರ್ಷಗಳ ಸುದೀರ್ಘ ಕಾಲವಿಳಂಬವನ್ನು ವಿವರಿಸಿರುವುದಿಲ್ಲ**.** ಅರ್ಜಿಯನ್ನು ಸದ್ಭಾವನೆಯಿಂದ ಸಲ್ಲಿಸಿರುತ್ತಾರೆ ಎಂಬ ಬಗ್ಗೆ ಮೌನವಹಿಸಿರುತ್ತಾರೆ**.** ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **18** ನಿಯಮ **17** ರಡಿಯಲ್ಲಿ ಹಕ್ಕಾಗಿ ಪರಿಹಾರವನ್ನು ಕೋರಿಕೊಳ್ಳಲು ಬರುವುದಿಲ್ಲ**.** ಅರ್ಜಿದಾರರು ದಾವಾ ಅನುಸೂಚಿತ ಸ್ವತ್ತಿಗೆ ಒಳಪಡುವಂತಹ ವ್ಯಕ್ತಿಯಾಗಿರುವುದಿಲ್ಲ**.** ಅರ್ಜಿದಾರರು/**2**ನೇ ಪ್ರತಿವಾದಿಯುಈ ದಾವೆಯನ್ನು ದಾಖಲು ಮಾಡಲು ಮೂಲ ಕಾರಣಕರ್ತರಾಗಿರುತ್ತಾರೆ**.** ನ್ಯಾಯಾಲಯದ ಆದೇಶದ ಬಗ್ಗೆ ತಿಳುವಳಿಕೆ ಇದ್ದರೂ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ**.** ಅರ್ಜಿದಾರರು/**2**ನೇ ಪ್ರತಿವಾದಿಯು ದಾವೆಯು ವಿಲೆಗಾಗಿ ಬಾಕಿ ಇರುವುದು ಗಮನಕ್ಕೆ ಇದ್ದರೂ ಸಹ**,** ಹಾಗೂ ಹಿಂದಿನ ವಕೀಲರು ನೋಟಿಸ್ ನೀಡಿದ್ದರೂ ಸಹ ಉದ್ದೇಶ ಪೂರ್ವಕಾಗಿ ಮೌನವಾಗಿದ್ದು**,** ಕಾಲವಿಳಂಬ ಮಾಡಿ ಈ ಅರ್ಜಿಯನ್ನು ದಾಖಲು ಮಾಡಿರುವ ಕಾರಣ ಅರ್ಜಿದಾರರು/**2**ನೇ ಪ್ರತಿವಾದಿಯು ಅರ್ಜಿಗಳನ್ನು ಖರ್ಚುಸಹಿತ ತಿರಸ್ಕರಿಸಬೇಕಾಗಿ ಕೋರಿಕೊಳ್ಳುತ್ತಾರೆ**.**

**4.** ನ್ಯಾಯಾಲಯದ ಮುಂದಿರುವ ದಾಖಲಾತಿಗಳು ಹಾಗೂ ಎರಡು ಕಡೆಯ ವಾದ ವಿವಾದಗಳನ್ನು ಆಲಿಸಿದ ನಂತರ ಸದರಿ ಅರ್ಜಿಯನ್ನು ತೀರ್ಮಾನಿಸುವಲ್ಲಿ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ**.**

ಅಂಶ **1:**ಅರ್ಜಿದಾರರು ಸಲ್ಲಿಸಿರುವ**,** ಮಧ್ಯಂತರ ಅರ್ಜಿ ಸಂಖ್ಯೆ **30** ಮತ್ತು **31** ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **18** ನಿಯಮ**17,** ಕಲಂ **151** ರಡಿಯಲ್ಲಿನ ಅಂಶಗಳನ್ನು ಮೇಲ್ನೋಟಕ್ಕೆ ರುಜುವಾತು ಪಡಿಸಿರುವರೇ**?**

ಅಂಶ **2:**ಯಾವ ಆದೇಶ**?**

**5.** ಎರಡು ಪಕ್ಷಗಾರರ ವಾದ ವಿವಾದಗಳನ್ನು ಆಲಿಸಿ**,** ನ್ಯಾಯಾಲಯದ ಮುಂದಿರುವ ದಾಖಲಾತಿಗಳ ಅಧಾರ ಮೇಲೆ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಯಿತು**.**

ಅಂಶ **1:-** ಸಕರಾತ್ಮಕವಾಗಿ

ಅಂಶ **2:-** ಅಂತಿಮ ಆದೇಶದಂತೆ

**-ಃ ಕಾರಣಗಳು ಃ-**

**6. ಅಂಶ 1 :-** ಅರ್ಜಿದಾರರು/**2**ನೇ ಪ್ರತಿವಾದಿಯು ಮೇಲ್ಕಂಡ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿ,**2**ನೇ ಪ್ರತಿವಾದಿಯನ್ನು ವಿಚಾರಣೆಗೆ ಒಳಪಡಿಸಲು ಹಂತವನ್ನು ಪುನರ್ ಸ್ಥಾಪಿಸಿ, ವಿಚಾರಣೆಗೆ ಒಳಪಡಿಸಿಕೊಳ್ಳಲು ಅನುಮತಿ ಕೋರಿಕೊಂಡಿರುತ್ತಾರೆ.

**7.** ವಾದಿಯು ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಭಂದಿಸಿದಂತೆ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ಪ್ರತಿವಾದಿಗಳ ವಿರುದ್ದ ದಾವೆಯನ್ನು ಸಲ್ಲಿಸಿರುತ್ತಾರೆ. ಡಿಡಬ್ಲೂ-**2** ಮತ್ತು **3**ರವರ ಪಾಟಿ ಸವಾಲಿನ ಹಂತದಲ್ಲಿ ಈ ಮೇಲ್ಕಂಡ ಅರ್ಜಿಯನ್ನು ದಾಖಲು ಮಾಡಿ **2**ನೇ ಪ್ರತಿವಾದಿಯನ್ನು ವಿಚಾರಣೆಗೆ ಒಳಪಡಿಸಲು ಹಂತವನ್ನು ಪುನರ್ ಸ್ಥಾಪಿಸಿ, ವಿಚಾರಣೆಗೆ ಒಳಪಡಿಸಿಕೊಳ್ಳಲು ಅನುಮತಿ ಕೋರಿ ಸುಮಾರು **11** ವರ್ಷಗಳ ನಂತರ ವಿಚಾರಣೆ ಒಳಪಡಿಸಲು ಕೋರಿ ಅರ್ಜಿಯನ್ನು ಕೋರಿರುತ್ತಾರೆ.

**8.** ವಾದಿಯು ಪ್ರತಿವಾದಿಗಳ ವಿರುದ್ದ ವಿಭಾಗ ಮತ್ತು ಪ್ರತ್ಯೇಕ ಸ್ವಾದೀನವನ್ನು ಕೋರಿ ದಾವೆಯನ್ನು ದಾಖಲು ಮಾಡಿದ್ದು, ಸದರಿ ದಾವೆಯಲ್ಲಿ ಅರ್ಜಿದಾರರು/**2**ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸಿಕೊಂಡು ಪ್ರಾಸ-**1**ರವರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ ಎಂಬುದು ಸರಿಯಷ್ಟೇ, ಸದರಿ ದಾವೆಯಲ್ಲಿ ಈಗಾಗಲೇ ದಿನಾಂಕ **3010.2015**ರಂದು ಪ್ರತಿವಾದಿಯ ವಿಚಾರಣೆಯನ್ನು ಇಲ್ಲಾ ಎಂಬುದಾಗಿ ಆದೇಶಿಸಲಾಗಿದೆ. ಈ ದಾವೆಯಲ್ಲಿನ ಸಂಗತಿಯಂತೆ ವಾಡಿಯು ವಿಭಾಗ ಮತ್ತು ಪ್ರತ್ಯೇಕ ಸ್ವಾದೀನಕೋರಿ ದಾವೆಯನ್ನು ದಾಖಲು ಮಾಡಿದ್ದು, **2**ನೇ ಪ್ರತಿವಾದಿಯ ತಮ್ಮ ಪ್ರತಿವಾದಪತ್ರವನ್ನು ಸಲ್ಲಿಸಿಕೊಂಡಿರುತ್ತಾರೆ. ಅದರಂತೆ, ಅರ್ಜಿದಾರರು/**2**ನೇ ಪ್ರತಿವಾದಿಗೆ ತನ್ನ ಪರವಾದ ವಾದವನ್ನು ಮಂಡಿಸಲು ಸಾಕಷ್ಟೂ ಅಂಶಗಳು ಇರುತ್ತದೆ ಎಂಬುದು ಕಂಡು ಬರುತ್ತಿದೆ. ವಾದಿಯು ತನ್ನ ತಕರಾರಿನಲ್ಲಿ ತಿಳಿಸಿರುವಂತೆ ಈ ದಾವೆಯನ್ನು ದಾಖಲು ಮಾಡಲು ಅರ್ಜಿದಾರರು ಕಾರಣ ಕರ್ತರು ಎಂಬುದಾಗಿ ತಿಳಿಸಿದ್ದು, ಅರ್ಜಿದಾರರಿಗೆ ಈ ದಾವೆಯನ್ನು ವಾದಿಸಲು ಸಾಕಷ್ಟು ಸಂಗತಿಗಳು ಇರುತ್ತದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಅರ್ಜಿದಾರರು ಸುಮಾರು **11** ವರ್ಷಗಳ ನಂತರ ಕಾಲವಿಳಂಬ ಮಾಡಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಆದ ಕಾರಣ ವಜಾಗೊಳಿಸಬೇಕಾಗಿ ಕೋರಿಕೊಳ್ಳುತ್ತಾರೆ. ಆದರೆ, ಒಬ್ಬ ಪಕ್ಷಗಾರರಿಗೆ ತನ್ನ ವಾದವನ್ನು ಮಂಡಿಸಲು ಸಾಕಷ್ಟು ಸಂಗತಿಗಳು ಇದ್ದಾಗ ಆತನಿಗೆ ಕಾಲವಿಳಂಬದ ಕಾರಣಕ್ಕೆ ಅವಕಾಶ ನಿರಾಕರಿಸಬಹುದೇ?. ಈ ದಾವೆಯಲ್ಲಿನ ಸಂಗತಿಗಳನ್ನು ಗಮನಿಸಲಾಗಿ, ಅರ್ಜಿದಾರರು ತಾನು ಅನಾರೋಗ್ಯದಿಂದ ಬಳಲುತ್ತಿದ್ದು, ಹಾಗೂ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದ ಕಾರಣ ನ್ಯಾಯಾಲಯಕ್ಕೆ ಹಾಜರಾಗಲೂ ಸಾಧ್ಯವಾಗಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಆ ಬಗ್ಗೆ ದಾಖಲಾತಿಗಳನ್ನು ಸಹ ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತಿಗಳನ್ನು ಪರಿಶೀಲಿಸಿದಾಗ, ಅರ್ಜಿದಾರರು ನಿರಂತರವಾಗಿ **11** ವರ್ಷಗಳಿಂದಲೂ ಸಹ ಅನಾರೋಗ್ಯ ಹೊಂದಿದ್ದರು ಎಂಬುದು ಕಂಡು ಬರುತ್ತಿಲ್ಲ. ಆದರೆ, ಅರ್ಜಿದಾರರು ಅನಾರೋಗ್ಯ ಪೀಡಿತರಾಗಿದ್ದರು

ಎಂಬುದು ಕಂಡು ಬರುತ್ತಿದೆ. ಹಾಗೂ ಸದರಿ ಅನಾರೋಗ್ಯ ಕಾರಣದಿಂದ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರು ಎಂಬುದು ಸಹ ಕಂಡು ಬರುತ್ತಿದೆ. ಹಾಗಾಗಿ, ಸದರಿ ದಾಖಲಾತಿಗಳಂತೆ ಅರ್ಜಿದಾರರು ಅನಾರೋಗ್ಯ ಪೀಡಿತರಾಗಿದ್ದು, ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರು ಎಂಬುದಾಗಿ ಕಂಡು ಬರುತ್ತಿದೆ. ಅರ್ಜಿದಾರರು ಸುಮಾರು **11** ವರ್ಷಗಳ ನಂತರ ಅರ್ಜಿಯನ್ನು ದಾಖಲು ಮಾಡಿರುತ್ತಾರೆ ಎಂಬುದು ಸರಿಯಷ್ಟೇ, ಅದೇ ರೀತಿಯಾಗಿ ಅರ್ಜಿದಾರರು ತಮ್ಮ ವಾದವನ್ನು ಮಂಡಿಸುವ ನಿಟ್ಟಿನಲ್ಲಿ ಸಾಕಷ್ಟು ಸಂಗತಿಗಳನ್ನು ಹೊಂದಿರುತ್ತಾರೆ ಎಂಬುದು ಸಹ ಸರಿಯಷ್ಟೇ. ಅರ್ಜಿದಾರರು ಕಾಲವಿಳಂಬ ಮಾಡಿ ಅರ್ಜಿಯನ್ನು ದಾಖಲು ಮಾಡಿರುತ್ತಾರೆ ಎಂಬ ಒಂದೇ ಕಾರಣದಿಂದ ಅರ್ಜಿಯನ್ನು ತಿರಸ್ಕರಿಸಿದ್ದೆ ಆದ್ದಲ್ಲಿ, **2**ನೇ ಪ್ರತಿವಾದಿಗೆ ತುಂಬಲಾರದ ನಷ್ಟ ಉಂಟಾಗಬಹುದಾದ ಸಂಗತಿಯನ್ನು ಅಲ್ಲಗಳೆಯುವಂತಿಲ್ಲ. ಮುಂದುವರೆದು, ವಾದಿಯು ದಾವೆಯನ್ನು **2010**ರಲ್ಲಿ ದಾಖಲಿಸಿದ್ದು, ಹಳೆಯ ಪ್ರಕರಣವಾಗಿರುತ್ತದೆ. ಹಾಗೂ ಅರ್ಜಿಯನ್ನು ಸಕಾಲದಲ್ಲಿ ಸಲ್ಲಿಸಿರುವುದಿಲ್ಲ. ಸದರಿ ಕಾಲವಿಳಂಬವನ್ನು ಖರ್ಚನ್ನು ವಿಧಿಸುವುದರ ಮೂಲಕ ಮನ್ನಿಸಬಹುದಾಗಿರುತ್ತದೆ. ಆದ್ದರಿಂದ, ಈ ಮೇಲ್ಕಂಡ ಚರ್ಚಿಸಿದ ಕಾರಣಗಳಿಗಾಗಿ **ಅಂಶ-1ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.**

**9. ಅಂಶ-2 :-** ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ಕೆಳಕಂಡ ಮಾಡುವ ಆದೇಶವೇನೆಂದರೆ:-

**ಆದೇಶ**

ಅರ್ಜಿದಾರ ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ **30** ಮತ್ತು **31** ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **18** ನಿಯಮ**17,** ಕಲಂ **151** ರಲ್ಲಿನ ಅರ್ಜಿಗಳನ್ನು ರೂ. **3,000/-**ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ **2**ನೇ ಪ್ರತಿವಾದಿಯನ್ನು ಮುಖ್ಯ ವಿಚಾರಣೆಗೆ ಪುನಃ ಕರೆಯಲಾಗಿದೆ. ಮುಂದುವರೆದು, **2**ನೇ ಪ್ರತಿವಾದಿಯು ನ್ಯಾಯಾಲಯವು ನಿಗದಿ ಪಡಿಸಿದ ಮುಂದಿನ ದಿನಾಂಕದಂದು ಹಾಜರಿದ್ದು ಯಾವುದೇ ಕಾಲವಕಾಶವನ್ನು ಕೋರದೇ ಮುಂದುವರೆದ ಮುಖ್ಯ ವಿಚಾರಣೆ ಒಳಪಡಿಸತಕ್ಕದ್ದು, ತಪ್ಪಿದಲ್ಲಿ, ಈ ಆದೇಶದ ಲಾಭವನ್ನು ಕಳೆದುಕೋಳ್ಳುತ್ತಾರೆ.

(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದನಂತರ ಅವರು ತಯಾರಿಸಿದ ಪ್ರತಿಯನ್ನು ಓದಿ, ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿಃ 10.06.2026 ರಂದು ಘೋಷಿಸಲಾಯಿತು.)

**(ಕಾವ್ಯಶ್ರೀ. ಎಂ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ

**(ತೆರೆದ ನ್ಯಾಯಾಲಯದಲ್ಲಿ ಪ್ರತ್ಯೇಕ ಆದೇಶವನ್ನು ಆದೇಶಿಸಲಾಯಿತು)**

**ಆದೇಶ**

ಅರ್ಜಿದಾರ ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ **30** ಮತ್ತು **31** ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **18** ನಿಯಮ**17,** ಕಲಂ **151** ರಲ್ಲಿನ ಅರ್ಜಿಗಳನ್ನು ರೂ. **3,000/-**ಗಳ ಖರ್ಚನ್ನು ವಿಧಿಸುವ ಮೂಲಕ ಪುರಸ್ಕರಿಸಲಾಗಿದೆ.

ಸದರಿ ಆದೇಶದಂತೆ **2**ನೇ ಪ್ರತಿವಾದಿಯನ್ನು ಮುಖ್ಯ ವಿಚಾರಣೆಗೆ ಪುನಃ ಕರೆಯಲಾಗಿದೆ. ಮುಂದುವರೆದು, **2**ನೇ ಪ್ರತಿವಾದಿಯು ನ್ಯಾಯಾಲಯವು ನಿಗದಿ ಪಡಿಸಿದ ಮುಂದಿನ ದಿನಾಂಕದಂದು ಹಾಜರಿದ್ದು ಯಾವುದೇ ಕಾಲವಕಾಶವನ್ನು ಕೋರದೇ ಮುಂದುವರೆದ ಮುಖ್ಯ ವಿಚಾರಣೆ ಒಳಪಡಿಸತಕ್ಕದ್ದು, ತಪ್ಪಿದಲ್ಲಿ, ಈ ಆದೇಶದ ಲಾಭವನ್ನು ಕಳೆದುಕೋಳ್ಳುತ್ತಾರೆ.

ತೆರೆದ ನ್ಯಾಯಾಲಯದಲ್ಲಿ **2**ನೇ ಪ್ರತಿವಾದಿಯ ವಿಚಾರಣೆಗಾಗಿ ಕರೆಯುವ ದಿನಾಂಕಃ **15.06.2026.**

**(ಕಾವ್ಯಶ್ರೀ. ಎಂ)**
ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಕೊಳ್ಳೇಗಾಲ